# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 251/2021

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಗಿರಿಯಯ್ಯ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಮಾದಯ್ಯ | | 15.04.2024 |
| ವಯಸ್ಸು | ಃ 55 ವರ್ಷ | | |
| ವೃತ್ತಿ | ಃ ವ್ಯವಸಾಯ | ಪ್ರಾ.ಸಾ. | ಃ 06 |
| ವಾಸಸ್ಥಳ | ಃ ಗೌಡರಹುಂಡಿ | ಚಾ.ಸಾ. | ಃ 02 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಮೃತ ಶಿವರಾಜಪ್ಪ ಇವರ ಪರಿಚಯ ಇದೆ. ಚಾ.ಸಾ-1 ಪವನ್ ಕುಮಾರ್ ಶಿವರಾಜಪ್ಪನ ಮಗನಿರುತ್ತಾನೆ. ಈಗ 2 ವರ್ಷಗಳ ಹಿಂದೆ ಒಂದು ದಿನ ಶಿವರಾಜಪ್ಪನನ್ನು ಶರತ್ ಕುಮಾರ್ ಕರೆದುಕೊಂಡು ಹೋಗಿದ್ದಾನೆ ಎಂದು ಹೇಳಿದ್ದರು ಆದಾಗಿ 4 ದಿನಕ್ಕೆ ಶಿವರಾಜಪ್ಪನ ಶವ ರಾಮಪುರ ನಾಲೆ ಬಳಿ ದೊರೆತಿತ್ತು. ಆ ಕಾಲಕ್ಕೆ ನಾನು ಸಹ ಆ ಶವ ದೊರೆತ ಸ್ಥಳಕ್ಕೆ ಹೋಗಿದ್ದೆ. ಆ ಕಾಲಕ್ಕೆ ಶಿವರಾಜಪ್ಪನ ಶವ ಸೇತುವೆ ಪಕ್ಕದಲ್ಲಿರುವ ನೀರಿನಲ್ಲಿ ದೊರೆತಿತ್ತು. ಆ ಕಾಲಕ್ಕೆ ಆ ಶವದಿಂದ ವಾಸನೆ ಬರುತ್ತಿತ್ತು. ಆ ಕಾಲಕ್ಕೆ ಪೋಲೀಸರು ಮೈಸೂರಿನ ಒಬ್ಬ ಸಾಬರ ವ್ಯಕ್ತಿಯ ಮೂಲಕ ಆ ಶವವನ್ನು ತೆಗೆಸಿದ್ದರು. ಆ ಕಾಲಕ್ಕೆ ಶಿವರಾಜಪ್ಪನ ಮಗ ಮತ್ತು ನಾನು ಆ ಶವವನ್ನು ಗುರುತಿಸಿದ್ದೆವು. ಆ ಶವವನ್ನು ಮೈಸೂರಿನ ಕೆ.ಆರ್ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದರು. ಆ ಕಾಲಕ್ಕೆ ಶವ ಬಿದ್ದ ಸ್ಥಳದಿಂದ ಬೇರೆ ಏನನ್ನು ಪಡೆದಿದ್ದರು ಎಂದು ನಾನು ಗಮನಿಸಿಲ್ಲ. ಶವ ಬಿದ್ದ ಸ್ಥಳದಲ್ಲಿ ಪೋಲೀಸರು ಬರವಣಿಗೆ ಮಾಡಿ ನನ್ನ ಸಹಿ ಪಡೆದಿದ್ದರು. ಸಂಜೆ 7.30 ರಿಂದ 8 ಗಂಟೆ ಸಮಯದಲ್ಲಿ ಆ ಬರವಣಿಗೆ ಮಾಡಿದ್ದರು. ಈಗ ನಾನು ನೋಡುತ್ತಿರುವ ನಿ.ಪಿ-3

ದಾಖಲೆ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ–3(ಬಿ) ಎಂದು ಗುರುತಿಸಿದೆ. ಆ ಕಾಲಕ್ಕೆ ಶಿವರಾಜಪ್ಪನ ದೇಹದ ಮೇಲೆ ಪಟಾಪಟಿ ನಿಕ್ಕರ್ ಇತ್ತು. ಅದನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಎಂ.ಒ 4 ನಿಕ್ಕರ್ ಅದೇ ಇರುತ್ತದೆ.

2. ಶಿವರಾಜಪ್ಪನ ಶವ ಪಂಚನಾಮೆ ಕಾಲಕ್ಕೂ ಸಹ ನಾನು ಹಾಜರಿದ್ದೆ. ಆ ಕಾಲಕ್ಕೆ ಶಿವರಾಜಪ್ಪನ ತಲೆಗೆ, ಮೊಣಕಾಲು ಮತ್ತು ಹಿಮ್ಮಡಿಗಳಿಗೆ ಗಾಯವಾಗಿತ್ತು. ಹಿಮ್ಮಡಿಗಳಿಗೆ ಕೊಚ್ಚಿದ ಗಾಯವಾಗಿತ್ತು. ಈಗ ನಾನು ನೋಡುತ್ತಿರುವ ಶವ ಪಂಚನಾಮೆ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಪಂಚನಾಮೆಯನ್ನು ನಿ.ಪಿ–9 ಮತ್ತು ಸಹಿಯನ್ನು ನಿ.ಪಿ–9(ಎ) ಎಂದು ಗುರುತಿಸಿದೆ. ಶಿವರಾಜಪ್ಪ ಯಾವ ಕಾರಣಕ್ಕೆ ಮತ್ತು ಹೇಗೆ ಮರಣಹೊಂದಿದ್ದಾನೆ ಎಂದು ನನಗೆ ಗೊತ್ತಿಲ್ಲ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

3. ನಿ.ಪಿ–3 ಮಹಜರ್ ಕಾಲಕ್ಕೆ ಶವ ದೊರೆತ ಸ್ಥಳದಿಂದ ಒಂದು ಬಾಟಲ್ ನೀರನ್ನು ಸಹ ಸಂಗ್ರಹಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಜೀಪ್ ಲೈಟಿನ ಬೆಳಕಿನಲ್ಲಿ ನಿ.ಪಿ–3 ಅನ್ನು ಬರೆದಿದ್ದರು ಎಂದರೆ ನಿಜ. ಶಿವರಾಜಪ್ಪನ ಮಗ ಪವನ್ ಕುಮಾರ್ ನು ಎರಡನೇ ಆರೋಪಿ ಮಲ್ಲಿಗಮ್ಮನ ಮಗಳನ್ನು ಪ್ರೀತಿಸಿ ಮದುವೆ ಮಾಡಿಕೊಳ್ಳಲು ತಯಾರಿ ನಡೆದ ಕಾರಣ ಶರತ್ ಕುಮಾರ್ ಆ ಮದುವೆಗೆ ವಿರೋದ ವ್ಯಕ್ತಪಡಿಸಿದ್ದು ನಂತರ ದಿಃ28.05.2021 ರಂದು ಶಿವರಾಜಪ್ಪ

*1* ನೇ ಆರೋಪಿತ ಶರತ್ ಕುಮಾರ್ ಜೊತೆಗೆ ಹೋದವನು ಮನೆಗೆ ವಾಪಸ್ಸು ಬಂದಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಪಾಟೀ ಸವಾಲು ಃ 1 ನೇ ಆರೋಪಿ ಪರ ವಕೀಲರಾದ ಶ್ರೀ ಸಿ.ಎಂ.ಜೆ ರವರಿಂದಃ-

*4.* ನಾನು ಪಂಚಾಯಿತಿ ಸದಸ್ಯನಾಗಿದ್ದೇನೆ ಎಂದರೆ ನಿಜ. ಪಂಚಾಯಿತಿ ಚುನಾವಣೆ ಕಾಲಕ್ಕೆ ಶಿವರಾಜಪ್ಪ ನನಗೆ ಸಪೋರ್ಟ್ ಮಾಡಿದ್ದ ಎಂದರೆ ಸರಿಯಲ್ಲ. ಶಿವರಾಜಪ್ಪ ನನ್ನೊಂದಿಗೆ ಚೆನ್ನಾಗಿದ್ದ ಎಂದರೆ ನಿಜ. ಶಿವರಾಜಪ್ಪ ಗ್ರಾಮದ ಎಲ್ಲರೊಂದಿಗೆ ಅನ್ಯೋನ್ಯವಾಗಿದ್ದ ಮತ್ತು ಎಲ್ಲರೊಂದಿಗೂ ಓಡಾಡುತ್ತಿದ್ದ ಎಂದರೆ ನಿಜ. ನಮ್ಮ ಮನೆಯ ಹಿಂಭಾಗದಲ್ಲಿ *1* ನೇ ಆರೋಪಿತ ಶರತ್ ಕುಮಾರ್ ಜಮೀನು ಇದೆ ಎಂದರೆ ನಿಜ. ನಮ್ಮ ಮನೆಯಿಂದ ಆತನ ಜಮೀನು *200–300* ಅಡಿ ದೂರದಲ್ಲಿದೆ. ಆ ಜಮೀನಿಗೆ ಹೋಗಲು ನಮ್ಮ ಮನೆಯ ಮುಂದಗಡೆ ಹೋಗಬೇಕು ಎಂದರೆ ನಿಜ. ಊರಿನಲ್ಲಿ ಶಿವರಾಜಪ್ಪನನ್ನು ಹುಡುಕಾಡಿದಾಗ ಎಲ್ಲಿಯೂ ಅವರು ದೊರೆತಿರಲಿಲ್ಲ. ಹೆಣ ಸಿಕ್ಕ ನಾಲೆ ರಾಮಪುರ ನಾಲೆ ಇರುತ್ತದೆ. ಶಿವರಾಜಪ್ಪನ ಹೆಣ ಸಿಕ್ಕಾಗ ಕೊಳೆತ ಸ್ಥಿತಿಯಲ್ಲಿತ್ತು ಎಂದರೆ ನಿಜ. ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ನಿಜ.

***3* ನೇ ಆರೋಪಿತನ ಪರ ವಕೀಲರು ಈ ಮೇಲಿನಂತೆ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

***2* ನೇ ಆರೋಪಿತನ ಪರ ವಕೀಲರು ಗೈರು ಹಾಜರಿದ್ದು ಅವರ ಪರ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4* ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು